**ದಿನಾಂಕಃ 01.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನಾನು ಪಿ.ಯು.ಸಿ.ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ ಹಾಗೂ ನನಗೆ ಸಮಾಜದಲ್ಲಿ ಕಾನೂನಿನ ಅರಿವು ಸ್ವಲ್ಪ ಮಟ್ಟಿಗೆ ಇದೆ. ದಾವೆಯನ್ನು ನನ್ನ ಜಮೀನಿನ ಕುರಿತು ಹೂಡಿರುತ್ತೇನೆ. ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಗಲಾಟೆಯು ನಡೆದಿರುತ್ತದೆ ಎಂದು ಹೇಳಿದ್ದು, ಗಲಾಟೆಯು ಯಾವ ದಿನಾಂಕದಂದು ಆಗಿರುತ್ತದೆ ಎಂದು ಗೊತ್ತಿಲ್ಲ, ಆದರೆ ಅದು ಕೊರೋನಾ ಸಮಯದಲ್ಲಿ ಆಗಿರುತ್ತದೆ. ಗಲಾಟೆ ನಡೆದ ಸಮಯದಲ್ಲಿ ಕೊರೋನಾ ಇರಲಿಲ್ಲ ಎಂದರೆ ಸರಿಯಲ್ಲ. ಗಲಾಟೆಯು ನಡೆದ ನಂತರ ನಾನು ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿರುವುದಿಲ್ಲ. ಸಾಕ್ಷಿಯು ಮುಂದುವರೆದು ಊರಿನ ಜನರೆಲ್ಲರೂ ಪಂಚಾಯಿತಿಗೆ ದೂರನ್ನು ನೀಡಿರುತ್ತೇನೆ. ಪಂಚಾಯಿತಿಯವರು ದೂರಿನ ನಂತರವೂ ಸಹ ಸರಿಯಾದ ಕ್ರಮವನ್ನು ಕೈಗೊಂಡಿರುವುದಿಲ್ಲ ಹಾಗಾಗಿ ಈ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚಾಯಿತಿದಾರರು ಯಾರೆಂದರೆ ಕಂಟನಕುಂಟೆ ಗ್ರಾಮ ಪಂಚಾಯಿತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಯಾವುದೇ ಗಲಾಟೆ ನಡೆದಿರುವುದಿಲ್ಲ ಹಾಗಾಗಿ ಯಾವುದೇ ದೂರನ್ನು ಸಹ ಪಂಚಾಯಿತಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದೂರನ್ನು ನೀಡಿರುತ್ತೇನೆ, ಅದರ ದಾಖಲೆಯನ್ನು ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ದಾವಾಸ್ವತ್ತಿನ ಮೂಲ ಮಾಲೀಕರು ಮಡಿವಾಳದವರು, ಅವರಿಂದ ರತ್ನಮ್ಮರವರು ಖರೀದಿ ಮಾಡಿದ್ದು, ರತ್ನಮ್ಮರವರಿಂದ ನಾನು ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ರತ್ನಮ್ಮರವರಿಗೆ ದಾವಾಸ್ವತ್ತು ಯಾವ ರೀತಿ ಬಂದಿರುತ್ತದೆ ಎಂದು ಗೊತ್ತಿಲ್ಲ. ಸಾಕ್ಷಿಯು ಅವರು ಖರೀದಿ ಮಾಡಿರುತ್ತಾರೆ ಅವರಿಂದ ನಾನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ರತ್ನಮ್ಮರವರ ಕಡೆಯಿಂದ ನಾನು ಖರೀದಿ ಮಾಡಿರುವ ಸ್ವತ್ತಿನ ಸಂಖ್ಯೆ 166 ರಲ್ಲಿ 20 X 30 ಅಡಿ ವಿಸ್ತೀರ್ಣದ ಜಾಗವನ್ನು ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿರುವ ಸೈಟು ಖಾಲಿ ಸೈಟು ಆಗಿರುತ್ತದೆ. ರತ್ನಮ್ಮರವರ ಕಡೆಯಿಂದ ನಾನು ಉತ್ತರದ ಅರ್ಧ ಭಾಗವನ್ನು ಖರೀದಿ ಮಾಡಿರುತ್ತೇನೆ. ಇನ್ನೂ ಉಳಿದ ಅರ್ಧ ಭಾಗವು ರತ್ನಮ್ಮರವರ ಹೆಸರಿನಲ್ಲಿಯೇ ಇತ್ತು ಎಂದು ನುಡಿಯುತ್ತಾರೆ. ಅರ್ಧ ಭಾಗದಲ್ಲಿ ರತ್ನಮ್ಮರವರು ಮನೆಯನ್ನು ಕಟ್ಟಿದ್ದರು ಎಂದರೆ ಸರಿ. ಸಾಕ್ಷಿಯು ಅಂಗಡಿಯೂ ಸಹ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಖರೀದಿಸುವ ಸಮಯದಲಿಲ ರತ್ನಮ್ಮರವರೇ ವಾಸವಿದ್ದರು ಎಂದರೆ ಸರಿ.

ದಿಃ 27.01.2016 ರಲ್ಲಿ ರತ್ನಮ್ಮರವರು ಕೆಂಪಣ್ಣರವರಿಗೆ ಅರ್ಧಭಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ದಿಃ 04.07.2006 ರಲ್ಲಿ ಖರೀದಿ ಮಾಡಿರುತ್ತೇನೆ ಎಂದು ನುಡಿಯತ್ತಾರೆ. ರತ್ನಮ್ಮರವರ ಕಡೆಯಿಂದ ಕೆಂಪಣ್ಣರವರು ಖರೀದಿ ಮಾಡಿದ ನಂತರ ಅವರೇ ಮತ್ತು ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಕೆಂಪಣ್ಣರವರು ಖರೀದಿ ಮಾಡಿರುವ ಬಗ್ಗೆ ಹಾಗೂ ಸ್ವಾಧೀನದಲ್ಲಿರುವ ಬಗ್ಗೆ ಗೊತ್ತಿಲ್ಲ. ದಿಃ 10.04.2017 ರಲ್ಲಿ ಕೆಂಪಣ್ಣರವರು ನಿರ್ಮಲಾ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಿರ್ಮಲಾರವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ನಿರ್ಮಲಾರವರ ಗಂಡ 2020 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರ ಗಂಡ ಮರಣ ಹೊಂದಿದ ನಂತರ ನಿರ್ಮಲಾರವರು ತಾಪಸ್ಸಿ ಹಳ್ಳಿ ಗ್ರಾಮಕ್ಕೆ ಹೋಗಿ ವಾಸಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರ್ಮಲಾರವರು ಅದೇ ಕಾಲೋನಿಯಲ್ಲಿ ಬೇರೆ ಕಡೆ ವಾಸಿಸುತ್ತಿರುತ್ತಾರೆ ಎಂದು ನುಡಿಯುತ್ತಾರೆ. ನಿರ್ಮಲಾರವರು ಅವರ ದಕ್ಷಿಣ ಭಾಗದ ಮಾಲೀಕತ್ವದ ಜಾಗವನ್ನು ಅಂಗಡಿಗಳಿಗೆ ಬಾಡಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಅವರು ತಿಂಗಳಿಗೆ ಒಂದು ಸಾರಿ ಬಂದು ಬಾಡಿಗೆಯನ್ನು ಪಡೆದುಕೊಂಡು ಹೋಗುತ್ತಾರೆ ಎಂದರೆ ಸರಿ.

ಪ್ರತಿವಾದಿಯವರು ರತ್ನಮ್ಮರವರು ಕಟ್ಟಿರುವ ಮನೆಯಲ್ಲಿ ಬದಲಾವಣೆ ಮಾಡಿರುವುದಿಲ್ಲ ಅದು ಮೊದಲಿನ ಸ್ಥಿತಿಯಲ್ಲಿಯೇ ಇರುತ್ತದೆ ಎಂದರೆ ಸರಿ. ದಾವಾಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ ರಸ್ತೆ, ಪಶ್ಚಿಮ ಮತ್ತು ಉತ್ತರಕ್ಕೆ ಬೇರೆಯವರ ಸೈಟು, ದಕ್ಷಿಣಕ್ಕೆ ರತ್ನಮ್ಮರವರ ಸ್ವತ್ತುಇರುತ್ತದೆ. ನಾನು ಖರೀದಿಸಿದ ನಂತರ ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿ. ಮನೆಯನ್ನು ಕಟ್ಟುವ ಸಮಯದಲ್ಲಿ ಪಂಚಾಯಿತಿಯಿಂದ ಪರವಾನಿಗೆಯನ್ನು ಪಡೆದು ಯೋಜನೆಯ ಅಂಗೀಕರಣ ಮಾಡಿಸಿಕೊಳ್ಳಬೇಕು ಎಂದರೆ ನಾನು ಮನೆ ಕಟ್ಟುವ ಸಮಯದಲ್ಲಿ ಯೋಜನೆಯನ್ನು ಅಂಗೀಕರಣವನ್ನು ಮಾಡಿಸಿಕೊಳ್ಳುವ ಅವಶ್ಯಕತೆ ಇರಲಿಲ್ಲ, ನಾನು ಪಂಚಾಯಿತಿಯಿಂದ ಪರವಾನಿಗೆಯನ್ನು ಪಡೆದುಕೊಂಡಿರುತ್ತೇನೆ. ನಾನು ಮನೆ ಕಟ್ಟುವ ಸಮಯದಲ್ಲಿ ಯೋಜನೆಯ ಅಂಗೀಕಾರವನ್ನು ಮಾಡಿಕೊಂಡು ಮನೆ ಕಟ್ಟುವ ವಿಷಯದ ಬಗ್ಗೆ ಗೊತ್ತಿದ್ದರೂ ಸಹ ಸದರಿ ಅಂಗೀಕರಣ ಪಡೆಯುವ ನಿಯಮ ಇರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿ ಕಡೆಯಿಂದ ಪಡೆದಂತಹ ನಿರಪೇಕ್ಷಣಾ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವೆಯನ್ನು ಹೂಡುವ ಸಮಯದಲ್ಲಿ ಸದರಿ ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ.

ಮನೆಯನ್ನು ಕಟ್ಟುವ ಸಮಯದಲ್ಲಿ ಮನೆಯ ಸುತ್ತಲೂ ಸೆಟ್ ಬ್ಯಾಕ್ ಅನ್ನು ಬಿಟ್ಟು ಮನೆಯನ್ನು ಕಟ್ಟಬೇಕು ಎಂದು ನಿಯಮ ಇರುತ್ತದೆ ಎಂದರೆ ಸಾಕ್ಷಿಯು ಬ್ಯಾಂಕಿನಿಂದ ಸಾಲವನ್ನು ಪಡೆದು ಮನೆಯನ್ನು ಕಟ್ಟಬೇಕಾದರೆ ಸದರಿ ನಿಯಮ ಅನ್ವಯವಾಗುತ್ತದೆ ಎಂದು ನುಡಿಯುತ್ತಾರೆ. ನಾನು ಮನೆಯನ್ನು ಕಟ್ಟಬೇಕದಾರೆ ಕಾನುನಿನ ನಿಯಮಗಳನ್ನು ಉಲ್ಲಂಘನೆ ಮಾಡಿ ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದಂತಹ ಜಾಗದ ವಿಸ್ತೀರ್ಣಕ್ಕಿಂತ ಹೆಚ್ಚಿನ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತೇನೆ ಹಾಗೂ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ಮನೆಯನ್ನು ಕಟ್ಟಿದ್ದರೂ ಸಹ ನ್ಯಾಯಾಲಯದಲ್ಲಿ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಪರಿಶೀಲನೆ ಮಾಡಿ ಎಂದು ಸಾಕ್ಷಿ ನುಡಿಯುತ್ತಾರೆ. ನ್ಯಾಯಾಲಯದಿಂದ ಕೋರ್ಟ್ ಕಮೀಷನರ್ ನನ್ನು ನೇಮಕ ಮಾಡಿ ಅಳತೆ ಮಾಡಿಲು ತೊಂದರೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಲಾಗಿ, ಅದು ಪ್ರತಿವಾದಿಯವರ ಮನೆ ಎಂದರೆ ಸರಿ ಎಂದು ನುಡಿಯುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಛಾಯಾಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಛಾಯಾಚಿತ್ರಗಳನ್ನು ತೋರಿಸಲಾಗಿ, ಸಾಕ್ಷಿಯು ಎರಡೂ ಛಾಯಾಚಿತ್ರದಲ್ಲಿರುವ ಕಟ್ಟುತ್ತಿರುವ ಮನೆಗಳು ಅವರದ್ದೇ ಎಂದರೆ ಸರಿ ಎಂದು ನುಡಿಯುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಎರಡೂ ಛಾಯಾಚಿತ್ರಗಳನ್ನು ಕ್ರಮವಾಗಿ ನಿಡಿ-2 ಮತ್ತು 3 ಎಂದು ಗುರುತಿಸಲಾಯಿತು. ಹಾಗೂ ಸಾಕ್ಷಿಗೆ ಇನ್ನೊಂದು ಛಾಯಾಚಿತ್ರವನ್ನು ತೋರಿಸಲಾಗಿ, ಅದು ಪ್ರತಿವಾದಿಯವರು ಅವರು ಅಂಗಡಿಯ ಎದುರು ಇರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಛಾಯಾಚಿತ್ರವನ್ನು ನಿಡಿ-4 ಎಂದು ಗುರುತಿಸಲಾಯಿತು.

ಪ್ರತಿವಾದಿಯು 20 X 30ರ ಅರ್ಧಭಾಗದಲ್ಲಿ ಆರ್.ಸಿ.ಸಿ. ಶೀಟ್‌ನ್ನು ಹಾಕಿ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ. ಆರ್.ಸಿ.ಸಿ. ಶೀಟ್ ಮೇಲೆ ಸಣ್ಣ ಒಂದು ಕಲ್ಲು ಬಿದ್ದರೂ ಸಹ ಅದು ಒಡೆದು ಹೋಗುತ್ತದೆ ಎಂದರೆ ಸರಿ. ನಿಡಿ-2 ಮತ್ತು 3ರಲ್ಲಿರುವ ಮನೆಕಟ್ಟುವ ಸಾಮಾಗ್ರಿಗಳು ನನ್ನದೇ ಆಗಿರುತ್ತದೆ ಎಂದರೆ ಸರಿ. ನಿಡಿ-3ರಲ್ಲಿರುವ ಕಬ್ಬಿಣದ ಚೇರ್ ನ್ನು ನಮ್ಮ ಮನೆಯ ಮೇಲೆ ಇಟ್ಟಿರುತ್ತೇವೆ. ಆರ್.ಸಿ.ಸಿ. ಶೀಟ್ ಮೇಲೆ ಅಲ್ಲ ಎಂದು ನುಡಿಯುತ್ತಾರೆ. ನಿಡಿ-3ರಲ್ಲಿ ಕಟ್ಟುತ್ತಿರುವ ಕಟ್ಟಡದ ಪಕ್ಕದಲ್ಲಿರುವ ಮನೆಯು ಪ್ರತಿವಾದಿಯವರದ್ದು ಎಂದರೆ ಸರಿ. ಅದನ್ನು ನಿಡಿ-3(ಎ) ಎಂದು ಗುರುತಿಸಲಾಯಿತು.

ಪಂಚಾಯಿತಿಯವರು ನಿರಪೇಕ್ಷಣಾ ಪತ್ರವನ್ನು ನೀಡುವ ಸಮಯದಲ್ಲಿ ಸ್ಥಳ ಪರಿಶೀಲನೆ ಮಾಡದೇ ನೀಡಿರುತ್ತಾರೆ. ಪ್ರತಿವಾದಿಯವರ ಮೇಲೆ ದಬ್ಬಾಳಿಕೆ ಮಾಡಿ ಅವರಿಗೆ ತೊದರೆ ಕೊಡುವ ಉದ್ದೇಶದಿಂದ ಸದರಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಗಂಡ ತೀರಿಕೊಂಡ ನಂತರ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ಸುಳ್ಳು ದಾವೆಯನ್ನು ಅವರ ವಿರುದ್ಧ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**